ಅವರೆ ಬೆಳೆಯು ದಕ್ಷಿಣ ಜಿಲ್ಲೆಗಳಲ್ಲಿ ಬೆಳೆಯುವ ಮುಖ್ಯ ದ್ವಿದಳ ಧಾನ್ಯ ಬೆಳೆಗಳಲ್ಲಿ ಒಂದು. ಸಾಮಾನ್ಯವಾಗಿ ರಾಗಿ ಬೆಳೆಯೊಂದಿಗೆ ಅಂತರ / ಮಿಶ್ರ ಬೆಳೆಯಾಗಿ ಬೆಳೆಯುವುದು ವಾಡಿಕೆ. ಇತ್ತೀಚಿನ ದಿನಗಳಲ್ಲಿ ಕಡಿಮೆ ಅವಧಿ ಹಾಗೂ ವರ್ಷವಿಡೀ ಬೆಳೆಯಬಹುದಾದ ತಳಿಗಳನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಅಭಿವೃದ್ಧಿ ಪಡಿಸಿರುವುದರಿಂದ ಅವರೆ ಬೆಳೆಯನ್ನು ಮುಖ್ಯ ಬೆಳೆಯಾಗಿ ಬೆಳೆಯುವುದು ಹೆಚ್ಚಾಗಿ ಕಂಡುಬರುತ್ತಿದೆ. ಈ ಬೆಳೆಯಿಂದ ಬೇಳೆ ಅಲ್ಲದೆ ಹಸಿರು ತರಕಾರಿಯನ್ನು ಸಹ ಪಡೆಯಬಹುದು.

ಬೇಸಾಯ ಕ್ರಮಗಳು

ಬಿತ್ತನೆ ಕಾಲ:

ಮುಂಗಾರಿನಲ್ಲಿ ಬಿತ್ತುವುದಾದರೆ ಆಗಸ್ಟ್‌ನಲ್ಲಿ, ಹಿಂಗಾರಿನಲ್ಲಿ ಬಿತ್ತುವುದಾದರೆ ಅಕ್ಟೋಬರ್‌ನಲ್ಲಿ ಹಾಗೂ ಬೇಸಿಗೆಯಲ್ಲಿ ಬಿತ್ತುವುದಾದರೆ ಫೆಬ್ರವರಿ–ಮಾರ್ಚ್‌ನಲ್ಲಿ ಬಿತ್ತುವುದು ಸೂಕ್ತ.

ತಳಿಗಳು

ಹೆಚ್.ಎ–3: ತಳಿಯ ಕಾಲಾವಧಿ 90–100 ದಿನಗಳಿದ್ದು ವರ್ಷವಿಡೀ ಬೆಳೆಯಬಹುದು.

ಹೆಚ್.ಎ–4: ತಳಿಯ ಕಾಲಾವಧಿ 95–105 ದಿನಗಳಿದ್ದು ವರ್ಷವಿಡೀ ಬೆಳೆಯಬಹುದು. ಮಣಿ ಅವರೆ ರೀತಿಯ ಕಾಯಿಗಳನ್ನು ಹೊಂದಿದ್ದು ಬೇಸಿಗೆಯಲ್ಲಿಯೂ ಸಹ ಸೊಗಡನ್ನು ಹೊಂದಿರುತ್ತದೆ.

ಸೂಚನೆ: ತರಕಾರಿಗಾಗಿ ಬೆಳೆದಲ್ಲಿ ಈ ತಳಿಗಳಿಂದ 70–75 ದಿವಸಗಳಲ್ಲಿ ಹಸಿಕಾಯಿಗಳನ್ನು ಕೊಯಿಲು ಮಾಡಬಹುದು.

ಬಿತ್ತನೆ ಬೀಜ: ಎಕರೆಗೆ 10–12 ಕೆ.ಜಿ ಬಿತ್ತನೆ ಬೀಜ ಬೇಕಾಗುತ್ತದೆ.

ಭೂಮಿಯ ಆಯ್ಕೆ ಮತ್ತು ಸಿದ್ಧತೆ: ಅವರೆಯನ್ನು ಎಲ್ಲಾ ರೀತಿಯ ಭೂಮಿಯಲ್ಲಿ ಬೆಳೆಯಬಹುದು. ಆದರೆ ನೀರು ಸರಾಗವಾಗಿ ಬಸಿದು ಹೋಗುವಂತಹ ಸಾಮರ್ಥ್ಯ ಹೊಂದಿರುವ ಭೂಮಿ ಉತ್ತಮ.

ಬಿತ್ತನೆ ಮಾಡುವ ಮೊದಲು ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡುವುದು. ಶಿಫಾರಸ್ಸು ಮಾಡಿರುವ ಕೊಟ್ಟಿಗೆ ಗೊಬ್ಬರವನ್ನು ಬಿತ್ತನೆಗೆ 2–3 ವಾರಗಳ ಮುಂಚೆ ಮಣ್ಣಿಗೆ ಸೇರಿಸುವುದು.

ಬೀಜೋಪಚಾರ

ಬಿತ್ತನೆಗೆ ಮುಂಚೆ ಎಕರೆಗೆ ಬೇಕಾಗುವ 10–12 ಕೆ.ಜಿ. ಬೀಜಕ್ಕೆ ಶಿಫಾರಸ್ಸು ಮಾಡಿರುವ ಜೀವಾಣು ಗೊಬ್ಬರಗಳಿಂದ ಲೇಪನ ಮಾಡಿ ಬಿತ್ತನೆ ಮಾಡುವುದು.

ವಿಧಾನ: 50 ಗ್ರಾಂ ಬೆಲ್ಲ ಅಥವಾ ಸಕ್ಕರೆಯನ್ನು ಅರ್ಧ ಲೀಟರ್ ನೀರಿನಲ್ಲಿ ಕರಗಿಸಿ 5 ನಿಮಿಷಗಳ ಕಾಲ ಕುದಿಸಿ ಅಂಟು ದ್ರಾವಣವನ್ನು ತಯಾರಿಸುವುದು. ಬೆಲ್ಲ ಅಥವಾ ಸಕ್ಕರೆ ದ್ರಾವಣವನ್ನು ಎಕರೆಗೆ ಬೇಕಾದ ಬಿತ್ತನೆ ಬೀಜಕ್ಕೆ ಲೇಪಿಸಿ ನಂತರ ಜೈವಿಕ ಗೊಬ್ಬರಗಳಾದ ರೈಜೋಬಿಯಂ (200 ಗ್ರಾಂ.) ಹಾಗೂ ರಂಜಕ ಕರಗಿಸುವ ಜೀವಾಣುಗಳನ್ನು (200 ಗ್ರಾಂ.) ಬೀಜಕ್ಕೆ ಲೇಪನ ಮಾಡುವುದು. ಅನಂತರ ಅರ್ಧ ಗಂಟೆ ನೆರಳಿನಲ್ಲಿ ಒಣಗಿಸಿ ಬಿತ್ತನೆಗೆ ಉಪಯೋಗಿಸುವುದು.

ಪೋಷಕಾಂಶಗಳು

ಕೊಟ್ಟಿಗೆ ಗೊಬ್ಬರ/ ಕಾಂಪೋಸ್ಟ್: 3 ಟನ್/ಎಕರೆಗೆ

ರಾಸಾಯನಿಕ ಗೊಬ್ಬರಗಳು (ಸಾ:ರಂ:ಪೊ): 10:20:10 ಕೆ.ಜಿ/ಎಕರೆಗೆ

ಬಿತ್ತನೆ ವಿಧಾನ ಮತ್ತು ಅಂತರ : ಭೂಮಿಯ ಫಲವತ್ತತೆಯನ್ನು ಆಧರಿಸಿ ಒಂದೂವರೆಯಿಂದ ಎರಡು ಅಡಿ ಅಂತರದ ಸಾಲುಗಳಲ್ಲಿ ಬೀಜದಿಂದ ಬೀಜಕ್ಕೆ ಅರ್ಧ ಅಡಿ ಅಂತರವಿರುವಂತೆ ಬಿತ್ತನೆ ಮಾಡುವುದು. ಬೀಜವನ್ನು 1–2 ಅಂಗುಲಕ್ಕಿಂತ ಹೆಚ್ಚಿನ ಆಳಕ್ಕೆ ಬೀಳದಂತೆ ಬಿತ್ತನೆ ಮಾಡುವುದು. ಬಿತ್ತನೆ ಸಮಯದಲ್ಲಿ ರಾಸಾಯನಿಕ ಗೊಬ್ಬರಗಳೆಲ್ಲವನ್ನು ಸಾಲಿನಲ್ಲಿ ಕೊಟ್ಟು ಮಣ್ಣಿನಲ್ಲಿ ಬೆರೆಸುವುದು.

ನೀರು ನಿರ್ವಹಣೆ: ಬಿತ್ತನೆಯಾದ ಕೂಡಲೆ ನೀರನ್ನು ಒದಗಿಸಿ ನಂತರ 7–10 ದಿನಗಳ ಅಂತರದಲ್ಲಿ ಹವಾಗುಣ ಮತ್ತು ಭೂಮಿಯಲ್ಲಿನ ತೇವಾಂಶಕ್ಕೆ ಅನುಗುಣವಾಗಿ ನೀರು ನಿರ್ವಹಣೆ ಮಾಡುವುದು. ಹೂವಾಡುವ ಮತ್ತು ಕಾಯಿ ಕಚ್ಚುವ ಹಂತಗಳು ಸಂದಿಗ್ಧ ಹಂತಗಳಾಗಿದ್ದು ಈ ಹಂತಗಳಲ್ಲಿ ತೇವಾಂಶ ಇಲ್ಲವಾದಲ್ಲಿ ಇಳುವರಿಯು ಗಣನೀಯವಾಗಿ ಕುಂಠಿತವಾಗುತ್ತದೆ. ಎಲ್ಲಾ ಹಂತಗಳಲ್ಲೂ ಭೂಮಿಯಲ್ಲಿ ನೀರು ನಿಲ್ಲದ ಹಾಗೆ ನೋಡಿಕೊಳ್ಳಬೇಕು.

ಅಂತರ ಬೇಸಾಯ ಮತ್ತು ಕಳೆ ನಿರ್ವಹಣೆ: ಮಣ್ಣು ಮತ್ತು ಹವಾಗುಣವನ್ನು ಅನುಸರಿಸಿ, 2–3 ಸಾರಿ ಅಂತರ ಬೇಸಾಯ ಮಾಡುವುದು. ಕಳೆ ತೆಗೆಯುವುದರ ಕಡೆ ಗಮನ ಹರಿಸುವುದು.

ಕೊಯ್ಲು ವಿಧಾನ: ಕಾಯಿಗಳು ಪೂರ್ತಿಯಾಗಿ ಒಣಗಿದ ನಂತರ ಕೀಳುವುದು. ಒಕ್ಕಣೆಮಾಡಿ ಸ್ವಚ್ಚಗೊಳಿಸುವುದು. ತರಕಾರಿಗಾಗಿ ಬಳಕೆ ಮಾಡುವುದಾದಲ್ಲಿ ಬಲಿತ ಹಸಿಕಾಯಿಯನ್ನು ಕೀಳುವುದು.

ಇಳುವರಿ

ಕಾಳು: 3–4 ಕ್ವಿಂ/ಎಕರೆಗೆ

ಹಸಿಕಾಯಿ: 12–15 ಕ್ವಿಂ/ಎಕರೆಗೆ

ಮುಖ್ಯವಾದ ಕಡಿಮೆ ಖರ್ಚಿನ ಬೇಸಾಯ ಕ್ರಮಗಳು

- ಶಿಫಾರಸ್ಸು ಮಾಡಿದ ತಳಿಗಳನ್ನೇ ಬಳಸುವುದು.
- ಶಿಫಾರಸ್ಸು ಮಾಡಿದ ಜೈವಿಕ ಗೊಬ್ಬರಗಳಿಂದ ಬೀಜೋಪಚಾರ ಮಾಡುವುದು.

ಸಸ್ಯ ಸಂರಕ್ಷಣೆ

ಪ್ರಮುಖ ಕೀಟಗಳು ಹಾಗೂ ನಿರ್ವಹಣೆ

ಸಸ್ಯಹೇನು

ಹಾನಿಯ ಲಕ್ಷಣಗಳು : ಚಿಗುರು ಎಲೆ, ಹೂ, ಮೊಗ್ಗು, ಎಳೆಕಾಯಿಗಳಿಂದ ನೂರಾರು ಸಸ್ಯಹೇನುಗಳು ರಸ ಹೀರುತ್ತಿರುತ್ತವೆ. ಎಲೆಗಳ ಮೇಲೆ ಅಂಟು ದ್ರಾವಣ ಕಾಣಿಸುತ್ತದೆ. ಗಿಡಗಳಲ್ಲಿ ಕಪ್ಪು ಬೂಷ್ಟು ಬೆಳೆಯುವುದು ಹಾಗೂ ಕಾಳುಗಳು ಚೀಕಾಗುವುದು.

ನಿರ್ವಹಣಾ ಕ್ರಮಗಳು

- ಎಕರೆಗೆ 8–10 ಹಳದಿ ಅಂಟು ಬಲೆಗಳನ್ನು ಹಾಕಬೇಕು.
- ಮೊದಲ ಹಂತದಲ್ಲಿ ಸಸ್ಯ ಹೇನಿನ ಬಾಧೆ ಕಂಡು ಬಂದಾಗ ಬೇವಿನ ಎಣ್ಣೆಯನ್ನು 5 ಮಿ.ಲೀ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.